ಓ.ಎಸ್. 101/2019 ಪಿ.ಡಬ್ಲ್ಯೂ: 5

ದಿನಾಂಕಃ 04.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀಸವಾಲುಃ</u> ಪ್ರತಿವಾದಿಪರ ವಕೀಲರಾದ ಶ್ರೀ ಎನ್ ಬಿ ಅವರಿಂದ –

1. ನಾನು 3 ನೇ ತರಗತಿ ಓದಿದ್ದೇನೆ. ನನ್ನ ಹುಟ್ಟಿದ ದಿನಾಂಕ, ತಿಂಗಳು ಮತ್ತು ವರ್ಷ ನಿಖರವಾಗಿ ಹೇಳಲು ಆಗುವುದಿಲ್ಲ. ನನಗೆ 3 ಜನ ಮಕ್ಕಳು. ನನ್ನ ದೊಡ್ಡ ಮಗ 09.02.1991 ರಂದು, ನನ್ನ ಮಗಳು ಅಕ್ಟೋಬರ್ 1993 ರಲ್ಲಿ ಹುಟ್ಟಿರುತ್ತಾಳೆ. ಸಾಕ್ಷಿ ಮುಂದುವರಿದು ನನ್ನ ಮಗಳು 25.10.1993 ರಂದು ಜನಿಸಿರುತ್ತಾಳೆ ಎಂದು ನುಡಿಯುತ್ತಾರೆ. ನನ್ನ ಕೊನೆ ಮಗ 18.04.1996 ರಂದು ಜನಿಸಿರುತ್ತಾನೆ. ದಿನಾಂಕ ನನಗೆ ನಿಖರವಾಗಿ ನೆನಪಿಲ್ಲ.

2. ನನ್ನ ಮಗಳ ಮದುವೆಯನ್ನು ನಾನು 2015 ರಲ್ಲಿ ಮಾಡಿದ್ದು, ದಿನಾಂಕ ಹಾಗೂ ತಿಂಗಳು ಮರೆತುಹೋಗಿರುತ್ತದೆ. ನನ್ನ ಇನ್ನೂ ಇಬ್ಬರ ಮಕ್ಕಳ ಮದುವೆ ದಿನಾಂಕ ಮರೆತು ಹೋಗಿರುತ್ತದೆ. ನನ್ನ ಮಗನ ಮದುವೆ ಈಗ 3 ವರ್ಷದ ಹಿಂದೆ ಮಾಡಿರುತ್ತೇನೆ. ಈಗ 3 ವರ್ಷದ ಹಿಂದೆ ಮಾಡಿರುವ ನನ್ನ ಮಕ್ಕಳ ಮದುವೆ ದಿನಾಂಕ ನನಗೆ ನೆನಪಿಲ್ಲ. ಆದರೆ ನನಗೆ ನಿಂಗಮ್ಮ ಅವರ ಮದುವೆ ದಿನಾಂಕ ಚೆನ್ನಾಗಿ ನೆನಪಿದೆ. ನಿಂಗಮ್ಮ ಅವರ ಮದುವೆ ಲಗ್ನಪತ್ರಿಕೆ ನನಗೆ ಕೊಟ್ಟಿರಲಿಲ್ಲ. ವಾದಿ ನಿಂಗಮ್ಮ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ಅವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ.

3. ನಿಂಗಮ್ಮ ಅವರ ಮದುವೆ ಮೈಸೂರಿನ ಜ್ಯೋತಿ ನಗರ ಪೊಲೀಸ್ ಕ್ವಾರ್ಟರ್ಸ್ ನ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಆಗಿರುತ್ತದೆ. ಸದರಿ ಮದುವೆ ಮೊದಲು ಮಾತುಕತೆಗೆ

ನಾನು ಸೇರಿರಲಿಲ್ಲ. ಸದರಿ ದೇವಸ್ಥಾನದ ಅರ್ಚಕರು ಇರಲಿಲ್ಲ. ಮದುವೆ ಮಾಡಲು ನಮ್ಮ ಊರಿನ ಅರ್ಚಕರನ್ನು ಕರೆದುಕೊಂಡು ಹೋಗಿದ್ದೇವು. ಸದರಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿತ್ತೋ ಇಲ್ಲವೋ ಗೊತ್ತಿಲ್ಲ . ಮೈಸೂರಿನ ಜ್ಯೋತಿ ನಗರ ಪೊಲೀಸ್ ಕ್ವಾರ್ಟರ್ಸ್ ನಲ್ಲಿ ಯಾವುದೇ ದೇವಸ್ಥಾನ ಇರಲಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹುಣಸೂರು.